
## ಸುದ್ದಿ ಸಿಂಚನ



ಕಟೀಲಿನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಮಹೋತ್ಸವದ ಏಳನೇ ದಿನ ವಿಶೇಷ ಅಲಂಕಾರದಲ್ಲಿ ಕಂಗೊಳಿಸುತ್ತಿರುವ ಕಟೀಲು ದುರ್ಗೆ.



ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಭಾನುವಾರ ಶ್ರೀ ಕದಂಬ ವನವಾಸಿನಿಯ ವಿಶೇಷ ಅಲಂಕಾರದಲ್ಲಿ ಕಂಗೊಳಿಸುತ್ತಿರುವ ಬಪ್ಪನಾಡು ದುರ್ಗೆ.

# ಕಲ್ಲು, ಮರಳು ಸಮಸ್ಯೆ ಇತ್ಯರ್ಥಕ್ಕೆ ಕೈ ನಿರಾಸಕ್ತಿ: ಕುಂಪಲ

## ಪಕ್ಷದ ಕಾರ್ಯಕ್ರಮ ಅನುಷ್ಠಾನದಲ್ಲಿ ದ.ಕ. ಬಿಜೆಪಿ ರಾಜ್ಯಕ್ಕೇ ಪ್ರಥಮ: ಅಧ್ಯಕ್ಷ ಸತೀಶ್ ಕುಂಪಲ ಅಭಿಮತ

**ಪ್ರಸಕ್ತ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾಗಿರುವ ಸತೀಶ್ ಕುಂಪಲ ದಣಿವರಿಯದ ವ್ಯಕ್ತಿತ್ವ, ಸರಳ, ಸಜ್ಜನ, ನಿಗರ್ವಿ, ಕ್ರಿಯಾಶೀಲ ಚಟುವಟಿಕೆ. 1989ರಲ್ಲಿ ಬೂತ್ ಕಾರ್ಯದರ್ಶಿಯಾಗಿ, ಬಳಿಕ ಗ್ರಾಮ, ಮಂಡಲ, ಜಿಲ್ಲಾ ಸ್ತರಗಳಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದರು. ತಾ.ಪಂ., ಜಿ.ಪಂ. ಸದಸ್ಯರಾಗಿ, ಜಿಲ್ಲಾ ಪಂಚಾಯಿತ್ತಿ ಉಪಾಧ್ಯಕ್ಷರಾಗಿ ಗ್ರಾಮ ಸ್ನೇಹಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಮಂಗಳೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಾಂಗ್ರೆಸ್‌ನ ಯು.ಟಿ.ಖಾದರ್‌ಗೆ ತೀವ್ರ ಪೈಪೋಟಿ ನೀಡಿ ಗಮನ ಸೆಳೆದಿದ್ದರು. ಸಾಮಾಜಿಕವಾಗಿ ಕುಂಪಲ ಬಾಲಕೃಷ್ಣ ಮಂದಿರದ ಸ್ಥಾಪಕ ಅಧ್ಯಕ್ಷರು. ಪ್ರಸಕ್ತ ಎರಡನೇ ಅವಧಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿದ್ದಾರೆ. ಜಿಲ್ಲೆಯಲ್ಲಿ ಪಕ್ಷದ ಹೋರಾಟ ಹಾಗೂ ಸಂಘಟನೆ ಕುರಿತಂತೆ ಸತೀಶ್ ಕುಂಪಲ ಜೊತೆ 'ಕನ್ನಡಪ್ರಭ' ಚಿಟ್ ಚಾಟ್...**

ಕನ್ನಡಪ್ರಭ ಚಿಟ್ ಚಾಟ್



"ಪಕ್ಷದ ಕೇಂದ್ರ ಹಾಗೂ ರಾಜ್ಯದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ದ.ಕ. ಜಿಲ್ಲೆ ರಾಜ್ಯಕ್ಕೇ ಪ್ರಥಮ ಎಂದು ಸಂಘಟನಾ ವರದಿಯೇ ಹೇಳುತ್ತಿದೆ. ಜಿಲ್ಲಾ ಪದಾಧಿಕಾರಿಗಳಿಂದ ತೊಡಗಿ ಬೂತ್ ಅಧ್ಯಕ್ಷರ ತನಕ ಕ್ರಿಯಾಶೀಲ ಸಂಘಟನೆಯಾಗಿ ಹೊರಹೊಮ್ಮಿದೆ. ಅನೇಕ ವರ್ಷಗಳಿಂದ ಹಿರಿಯರು ಹಾಕಿಕೊಟ್ಟ ಹೆಜ್ಜೆ ಗುರುತು ಈಗಲೂ ಇದ್ದು, ಎಲ್ಲವೂ ಇದರಿಂದ ಸಾಧ್ಯವಾಗಿದೆ.

• **ಸತೀಶ್ ಕುಂಪಲ,** ದಕ ಬಿಜೆಪಿ ಅಧ್ಯಕ್ಷ

■ **ದ.ಕ. ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ ಎಂಬ ಆರೋಪ ಇದೆಯಲ್ಲ?**

ಇಂತಹ ಆರೋಪ ಸರಿ ಅಲ್ಲ, ಇದರಲ್ಲಿ ಹುರುಳು ಕೂಡ ಇಲ್ಲ. ದ.ಕ.ದಲ್ಲಿ ಇರುವ ಬಿಜೆಪಿ ಶಕ್ತಿ ಕೇಂದ್ರಗಳಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಪ್ರಶಿಕ್ಷಣ ವರ್ಗ ನಡೆಸಿದೆ. ಈ ಮೂಲಕ ಆಡಳಿತಾರೂಢ ರಾಜ್ಯ ಸರ್ಕಾರದ ವಿರುದ್ಧ ನಿರಂತರ ಹೋರಾಟವನ್ನು ಸಂಘಟಿತವಾಗಿಯೇ ನಡೆಸಿದ್ದೇವೆ. ಪಕ್ಷದ ಕೇಂದ್ರ ಹಾಗೂ ರಾಜ್ಯದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ದ.ಕ. ಜಿಲ್ಲೆ ರಾಜ್ಯಕ್ಕೇ ಪ್ರಥಮ ಎಂದು ಸಂಘಟನಾ ವರದಿಯೇ ಹೇಳುತ್ತಿದೆ. ಜಿಲ್ಲಾ ಪದಾಧಿಕಾರಿಗಳಿಂದ ತೊಡಗಿ ಬೂತ್ ಅಧ್ಯಕ್ಷರ ತನಕ ಕ್ರಿಯಾಶೀಲ ಸಂಘಟನೆಯಾಗಿ ಹೊರಹೊಮ್ಮಿದೆ. ಅನೇಕ ವರ್ಷಗಳಿಂದ ಹಿರಿಯರು ಹಾಕಿಕೊಟ್ಟ ಹೆಜ್ಜೆ ಗುರುತು ಈಗಲೂ ಇದ್ದು, ಎಲ್ಲವೂ ಇದರಿಂದ ಸಾಧ್ಯವಾಗಿದೆ.

■ **ಪಕ್ಷದಲ್ಲಿನ ಮಾಜಿಗಳನ್ನು, ಹಿರಿಯರನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆಯಲ್ಲ?**

ಪಕ್ಷದ ಅನೇಕ ಕಾರ್ಯಕ್ರಮಗಳಲ್ಲಿ, ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಜಿಲ್ಲೆಗೆ ಭೇಟಿ ನೀಡುವಾಗ ಹೊಸಬರಿಗೆ ಮಾತ್ರವಲ್ಲ ಹಳಬರಿಗೂ ಸಮಾನ ಅವಕಾಶ ನೀಡಲಾಗುತ್ತದೆ. ಹಾಗಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಲಾಗುತ್ತಿದೆ.

■ **ದ.ಕ. ಜಿಲ್ಲೆಯಲ್ಲಿ ಕೆಂಪು ಕಲ್ಲು ಮತ್ತು ಮರಳಿನ ಸಮಸ್ಯೆ ಸುಲಭವಾಗಿ ಇತ್ಯರ್ಥವಾಗದಷ್ಟು ಬೆಳೆದಿದೆಯೇ?**

ಇದೊಂದು ದ.ಕ. ಜಿಲ್ಲೆಯ ಜ್ವಲಂತ ಸಮಸ್ಯೆಯಾಗಿದ್ದು, ಇದರ ಪರಿಹಾರಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಆಸಕ್ತಿ ಇಲ್ಲ. ಈ ಸಮಸ್ಯೆಯ ಆಳವನ್ನು ತಿಳಿಸುವ ಪ್ರಯತ್ನವನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಡುತ್ತಿಲ್ಲ ಎನಿಸುತ್ತದೆ. ಕೂಲಿ ಹಾಗೂ ಕಟ್ಟಡ ಕಾರ್ಮಿಕರ ಬದುಕನ್ನು ಈ ಸಮಸ್ಯೆ ಕಂಗಾಲು ಮಾಡಿದೆ. ಸರ್ಕಾರಕ್ಕೆ ಮನಸ್ಸು ಮಾಡಿದರೆ, ಪರಿಹಾರ ಆಗಲೇ ಬೇಕು ಎಂದು ಆಸಕ್ತಿ ವಹಿಸಿದರೆ ಖಂಡಿತ ಸಾಧ್ಯವಿದೆ. ಬಿಜೆಪಿ ಹೋರಾಟ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಿದೆ.

■ **ಬಿಜೆಪಿಯ ನಿಯೋಗ ಸರ್ಕಾರವನ್ನು ಭೇಟಿ ಮಾಡಿ ಸಮಸ್ಯೆಗೆ ತಾರ್ಕಿಕ ಅಂತ್ಯ ಕಾಣಿಸಲು ಪ್ರಯತ್ನಿಸಿದರೂ ಯಾಕೆ ಸಾಧ್ಯವಾಗುತ್ತಿಲ್ಲ?**

ಮುಖ್ಯಮಂತ್ರಿಗಳಿಗೆ ಸಮಸ್ಯೆಯ ಗಂಭೀರತೆಯನ್ನು ಬಿಜೆಪಿ ನಿಯೋಗ ಮನವರಿಕೆ ಮಾಡಿದೆ. ಸಾಮಾನ್ಯ ಜನರಿಗೂ ಕೆಂಪು ಕಲ್ಲು, ಮರಳು ಸುಲಭದಲ್ಲಿ ಸಿಗುವಂತಾಗಲು ನಿಯಮದಲ್ಲಿ ಸರಳೀಕರಣ ಆಗಬೇಕು. ಈ ಮೂಲಕ ಕಾರ್ಮಿಕರನ್ನು ಸಂಕಷ್ಟದಿಂದ ಪಾರು ಮಾಡಬೇಕು.

■ **ಈ ವಿಚಾರದಲ್ಲಿ ರಚನಾತ್ಮಕ ವಿಪಕ್ಷವಾಗಿ ಹೋರಾಟದಲ್ಲಿ ಯಶಸ್ಸು ಕಾಣಲು ಬಿಜೆಪಿ ವಿಫಲವಾಯಿತೇ?**

ಕಾಂಗ್ರೆಸ್ ಆಡಳಿತಕ್ಕೆ ರಾಜ್ಯದಲ್ಲಿ 135 ಶಾಸಕರ ಬೆಂಬಲ ಇದೆ ಎಂಬ ದುರಹಂಕಾರವೂ ಆಗಿರಬಹುದು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಆಡಳಿತಾತ್ಮಕ ನಿರ್ಧಾರ ಕೈಗೊಂಡಾಗ ಸರಿ, ತಪ್ಪುಗಳ ಬಗ್ಗೆ ಹೋರಾಟ ಮಾಡುವ ಕರ್ತವ್ಯವನ್ನು ಬಿಜೆಪಿ ನಿಭಾಯಿಸುತ್ತದೆ. ಆದರೆ ಈ ಭಂಡ ಸರ್ಕಾರ ತಾನು ನಡೆದದ್ದೇ ದಾರಿ ಎನ್ನುವಂತೆ ಆಡಳಿತ ನಡೆಸುವುದರಿಂದ ಮುಂದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳೇ ಇದಕ್ಕೆ ತಕ್ಕ ಉತ್ತರ ನೀಡುತ್ತಾರೆ.

■ **ಕೇಂದ್ರ ಸರ್ಕಾರದ ಸಾಧನೆ ಜನತೆ ಮುಂದಿಡುವ ಜೊತೆಗೆ ರಾಜ್ಯ ಸರ್ಕಾರದ ವಿರುದ್ಧವೂ ಅನೇಕ ಹೋರಾಟಗಳನ್ನು ಸಂಘಟಿಸುತ್ತಿದೆ. ಇದು ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ?**

ಕೇಂದ್ರ ಸರ್ಕಾರದ ಯೋಜನೆಗಳನ್ನು ಜನಸಾಮಾನ್ಯರಿಗೆ ತಿಳಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ವಿಕಸನ ಭಾರತ ಘೋಷವಾಕ್ಯದಡಿ ಅಭ್ಯಾಸ ವರ್ಗಗಳನ್ನು ನಡೆಸಲಾಗುತ್ತದೆ. ಆ ಮೂಲಕ ಜನರಿಗೆ ಸವಲತ್ತು ತಲುಪಿಸುವಲ್ಲಿ ಕಾರ್ಯಕರ್ತರು ಶ್ರಮಿಸುತ್ತಾರೆ. ರಾಜ್ಯ ಸರ್ಕಾರದ ಅನೇಕ ಆಡಳಿತ ವೈಫಲ್ಯಗಳ ವಿರುದ್ಧ ಹೋರಾಟ ಮೂಡುವ ಮೂಲಕ ಜನಸಾಮಾನ್ಯರ ಭಾವನೆಗಳಿಗೆ ಸ್ಪಂದಿಸುವ ಕೆಲಸವನ್ನು ನಿರಂತರ ಮಾಡುತ್ತಿದ್ದೇವೆ. ಕೆಲವೊಂದು ವಿಚಾರಗಳಲ್ಲಿ ಸರ್ಕಾರ ಎಚ್ಚೆತ್ತುಕೊಂಡಿದೆ.

■ **ದ.ಕ. ಬಿಜೆಪಿ ಪ್ರಖರವಾಗಿ ಕೆಲಸ ಮಾಡುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿದೆಯಲ್ಲ?**

ರಾಜ್ಯ ಆಡಳಿತದಲ್ಲಿ ವಿಪಕ್ಷವಾಗಿ ಬಿಜೆಪಿಯು ಕಾಂಗ್ರೆಸ್ ಸರ್ಕಾರದ ದುರಾಡಳಿತ ವಿರುದ್ಧ ಹೋರಾಟ ನಡೆಸುತ್ತಿದೆ. ಇಂತಹ ಸಂದರ್ಭ ಆಡಳಿತಾರೂಢ ಕಾಂಗ್ರೆಸ್‌ನ ಜನನಾಯಕರು ಈ ರೀತಿ ಹೇಳಿಕೆ ನೀಡುತ್ತಿರುವುದು ಸ್ವಾಭಾವಿಕ. ಆದರೆ ಬಿಜೆಪಿಯ ಸಂಘಟನೆ ಮತ್ತು ಜನರ ಭಾವನೆಗಳು ನಮ್ಮ ಹೋರಾಟಕ್ಕೆ ಸ್ಪಂದನೆ ನೀಡಿವೆ.

■ **ದ.ಕ.ದಲ್ಲಿ ಬಿಜೆಪಿ-ಆರ್‌ಎಸ್‌ಎಸ್ ನಡುವಿನ ಬಾಂಧವ್ಯ ಹೇಗಿದೆ?**

ಅತ್ಯುತ್ತಮವಾಗಿದೆ. ಆರ್‌ಎಸ್‌ಎಸ್ ಹಿರಿಯರ ಸಲಹೆಯನ್ನು ಪಡೆದುಕೊಂಡು ಮುಂದುವರಿಯುವುದು ಕ್ರಮ. ತಪ್ಪಿದಾಗ ತಿದ್ದಿ ಸರಿಪಡಿಸುವುದು, ಮಾರ್ಗದರ್ಶನ ಮಾಡುವುದು ಇದ್ದೇ ಇದೆ.

■ **ಪುತ್ತೂರಿನ ಅರುಣ್ ಕುಮಾರ್ ಪುತ್ತಿಲಗೆ ಬಿಜೆಪಿಯಲ್ಲಿ ಸ್ಥಾನಮಾನ ನೀಡುವ ವಿಚಾರ ಎಲ್ಲಿವರೆಗೆ ಬಂತು?**

ಅರುಣ್ ಕುಮಾರ್ ಪುತ್ತಿಲ ಸಹಿತ ಪಕ್ಷ ಸಂಘಟನೆ ಜೊತೆ ಕ್ರಿಯಾಶೀಲ ಕೆಲಸ ಮಾಡುವ ಎಲ್ಲರಿಗೂ ಸಂಘಟನಾತ್ಮಕ ಶಕ್ತಿಯನ್ನು ಬಿಜೆಪಿ ನೀಡುತ್ತದೆ ಎಂದಷ್ಟೇ ಹೇಳುತ್ತೇನೆ.

■ **ಅರುಣ್ ಕುಮಾರ್ ಪುತ್ತಿಲಗೆ ಸ್ಥಾನಮಾನ ಕೊಡದ ಕಾರಣ ಪುತ್ತೂರಲ್ಲಿ ಬಿಜೆಪಿ ವೀಕ್ ಆಗಿದೆ ಎಂದ ಮಾತು ಇದೆಯಲ್ಲ?**

ಬಿಜೆಪಿ ಸಂಘಟನಾತ್ಮಕವಾಗಿ ಪುತ್ತೂರಿನಲ್ಲಿ ಅತ್ಯುತ್ತಮವಾಗಿದೆ. ಎಲ್ಲ ಬೂತ್‌ಗಳಲ್ಲಿ ಕಾರ್ಯಕರ್ತರು ಉತ್ತಮವಾಗಿಯೇ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಯಾವುದೇ ಸಂಶಯ ಬೇಡ.

■ **ಜನಸಾಮಾನ್ಯರ ಸಂಕಷ್ಟಗಳಿಗೆ ಬಿಜೆಪಿ ಮುಖಂಡರ, ಕಾರ್ಯಕರ್ತರ ಸ್ಪಂದನ ಇಲ್ಲ ಎಂಬ ದೂರಿದೆ?**

ಜಿಲ್ಲೆಯಲ್ಲಿ ಬೂತ್ ಮಟ್ಟದ ವರೆಗೆ ಅಭ್ಯಾಸ ವರ್ಗ ನಡೆಸಲಾಗಿದೆ. ಅದರ ಉದ್ದೇಶವೇ ಜನಸಾಮಾನ್ಯರ ಕಷ್ಟಗಳಿಗೆ ಮುಖಂಡರು, ಕಾರ್ಯಕರ್ತರು ಸ್ಪಂದಿಸಬೇಕು ಎನ್ನುವುದು. ಇದು ನಿರಂತರವಾಗಿ ನಡೆಯಲಿದೆ.

### ಚುನಾವಣೆ ಯಾವಾಗ ಬಂದರೂ ಎದುರಿಸಲು ಬಿಜೆಪಿ ಸಿದ್ಧ

■ **ಸ್ಥಳೀಯ ಸಂಸ್ಥೆಗಳ ಚುನಾಣೆಗೆ ಸಂಬಂಧಿಸಿ ಬಿಜೆಪಿ ಸಿದ್ಧತೆ ಹೇಗೆ ನಡೆಯುತ್ತಿದೆ?**

ನಾನು ಪಕ್ಷದ ಜಿಲ್ಲಾ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಬಳಿಕ ಲೋಕಸಭಾ ಚುನಾವಣೆಯನ್ನು ಕಾರ್ಯಕರ್ತರೊಂದಿಗೆ ಸೇರಿ ಯಶಸ್ವಿಯಾಗಿ ಎದುರಿಸಿದೆವು. ನಂತರ ಬಂದ ವಿಧಾನ ಪರಿಷತ್ ಚುನಾವಣೆ, ಬಿಜೆಪಿ ಸದಸ್ಯತ್ವ ಅಭಿಯಾನ, ಮನ್‌ಕಿ ಬಾತ್ ಮಂತಾದ ಅನೇಕ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಹೀಗಾಗಿಯೇ ಯಾವಾಗ ಬೇಕಾದರೂ ಚುನಾವಣೆ ಘೋಷಣೆ ಮಾಡಲಿ, ದ.ಕ. ಬಿಜೆಪಿ ಚುನಾವಣೆಯನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗಿಯೇ ಇದೆ.

# ಕಟೀಲು ದೇವಳ: 35 ಸಾವಿರಕ್ಕೂ ಅಧಿಕ ಭಕ್ತರು ಭೇಟಿ

• **ಕನ್ನಡಪ್ರಭ ವಾರ್ತೆ** ಮೂಲ್ಕಿ

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಭಾನುವಾರ ಅಧಿಕ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದರು.

ಸುಮಾರು 35000ಕ್ಕೂ ಮಿಕ್ಕಿ ಭಕ್ತರು ದೇವಳಕ್ಕೆ ಆಗಮಿಸಿದ್ದು, ಅನ್ನಪ್ರಸಾದ ಸ್ವೀಕರಿಸಿದರು. ದೇವಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ, ಅಖಿಲ ಭಾರತೀಯ ಶಾಸ್ತ್ರೀಯ ಸಂಗೀತ ನೃತ್ಯ ಕಲಾವಿದರ ತಂಡದಿಂದ ಶಾಸ್ತ್ರೀಯ ಸಂಗೀತ ಹಾಗೂ ನೃತ್ಯಸೇವೆ, ಬಡಗತಿಟ್ಟು ಯಕ್ಷಗಾನ ದ್ರೌಪತಿ ಪ್ರತಾಪ, ಕರ್ಣಸೇನಾಧಿಪತ್ಯ-ಗಾಂಢೀವ ನಿಂದನೆ ಪ್ರದರ್ಶನ ನಡೆಯಿತು.


ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಉತ್ಸವದ ಏಳನೇ ದಿನವಾದ ಭಾನುವಾರ ಬೆಳಗ್ಗಿನಿಂದಲೇ ಜನ ಸಂದಣಿಯಿತ್ತು. ಬೆಳಗ್ಗೆ ಶ್ರೀ ಪತಂಜಲಿ ಯೋಗ ಶಿಕ್ಷಣ ಫೌಂಡೇಶನ್ ವತಿಯಿಂದ ಸಾಮೂಹಿಕ ಯೋಗ, ದುರ್ಗಾ ನಮಸ್ಕಾರ ನಡೆಯಿತು.

ದೇವಳದ ಹೊರಾಂಗಣ, ಹೊರ ಆವರಣದಲ್ಲಿ ಸುಮಾರು ಸಾವಿರಕ್ಕೂ ಮಿಕ್ಕಿ ಸಮಿತಿಯ ಸದಸ್ಯರು ಸಾಮೂಹಿಕ ಯೋಗ ದುರ್ಗಾ ನಮಸ್ಕಾರ, ಶ್ರೀ ಮಹಾಲಕ್ಷ್ಮ್ಯಷ್ಟಕಂ ಸ್ತೋತ್ರ ಪಠಣ ಹಾಗೂ ಪುಷ್ಪಾರ್ಚನೆ ನಡೆಸಿದರು. ಯೋಗ ಕಾರ್ಯಕ್ರಮಕ್ಕೆ ಬೆಳಗ್ಗೆ ದೇವಳದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತರು, ಮೂಲ್ಕಿ ನಗರ ಪಂಚಾಯಿತಿ ಅಧ್ಯಕ್ಷ ಸುನೀಲ್ ಆಳ್ವ, ದೇವಳದ ಸಹ ಅರ್ಚಕ ಪ್ರಸಾದ್ ಭಟ್, ಸಮಿತಿ ಪದಾಧಿಕಾರಿಗಳು ಚಾಲನೆ ನೀಡಿದರು.

**15000ಕ್ಕೂ ಅಧಿಕ ಭಕ್ತರು ಭೇಟಿ:** ಬಪ್ಪನಾಡು ದೇವಸ್ಥಾನದಲ್ಲಿ ಭಾನುವಾರ ಭಜನಾ ಕಾರ್ಯಕ್ರಮ, ಚಂಡಿಕಾಯಾಗ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ಈ ದಿನ ಸುಮಾರು 15000ಕ್ಕೂ ಮಿಕ್ಕಿ ಭಕ್ತರು ದೇವಳಕ್ಕೆ ಭೇಟಿ ನೀಡಿದರು. 8000ಕ್ಕೂ ಮಿಕ್ಕಿ ಭಕ್ತರು ಅನ್ನ ಪ್ರಸಾದ ಸ್ವೀಕರಿಸಿದರು. ಹೆಚ್ಚಿನ ಜನ ಸಂದಣಿ ಇದ್ದುದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ರಾಫಿಕ್ ಜಾಂ ಉಂಟಾಯಿತು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳದಲ್ಲಿ ಲಲಿತಪಂಚಮಿಯಂದು ಸಾಮೂಹಿಕ ಚಂಡಿಕಾಯಾಗ ಸಂಪನ್ನಗೊಂಡಿತು.




ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಶರನ್ನವರಾತ್ರಿ ಹಿನ್ನೆಲೆ ದೇವಳದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ವಿದ್ಯುತ್ ದೀಪಗಳಿಂದ ಅಲಂಕಾರ ಕಣ್ಮನ ಸೆಳೆಯುತ್ತಿದೆ.

ಎವಿಜಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಪುತ್ತೂರು.
(ನೋಂದಣಿ ಸಂಖ್ಯೆ : ಸಿಆರ್-05:6686/2025-26)
ಖಾಸಗಿ ಬಸ್ ನಿಲ್ದಾಣದ ಎದುರು, ನೆಲ್ಲಿಕಟ್ಟೆ, ಪುತ್ತೂರು ದ.ಕ. - 574201.
ದೂರವಾಣಿ : 9901017983, e-mail : avgsccsputtur@gmail.com

ನಮ್ಮ ಸಂಸ್ಥೆಯ
ಲೋಕಾರ್ಪಣಾ ಸಮಾರಂಭ
ದಿನಾಂಕ : 29-09-2025ನೇ ಸೋಮವಾರ ಪೂರ್ವಾಹ್ನ ಗಂಟೆ 9.30
ಸೊಸೈಟಿ ಕಛೇರಿಯಲ್ಲಿನ ಕಾರ್ಯಕ್ರಮಗಳು
ಕಛೇರಿಯ ಉದ್ಘಾಟನೆ : ಶ್ರೀ ಸಿ.ಜೆ. ಗಂಗಾಧರ, ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ಒಕ್ಕಲಿಗರ ಸಂಘ (ರಿ), ಬೆಂಗಳೂರು ಅಧ್ಯಕ್ಷರು, ಕಾಮಗಾರಿ ಉಸ್ತುವಾರಿ, ರಾಜ್ಯ ಒಕ್ಕಲಿಗರ ಸಂಘ (ರಿ), ಬೆಂಗಳೂರು
ಭದ್ರತಾ ಕೋಶದ ಉದ್ಘಾಟನೆ : ಶ್ರೀ ಸಂಜೀವ ಮಠಂದೂರು, ಮಾಜಿ ಶಾಸಕರು, ಪುತ್ತೂರು ವಿಧಾನಸಭಾ ಕ್ಷೇತ್ರ
ಗಣಕಯಂತ್ರದ ಉದ್ಘಾಟನೆ : ಶ್ರೀ ಶಶಿಕುಮಾರ್ ರೈ ಬಾಲ್ಯೊಟ್ಟು, ನಿರ್ದೇಶಕರು, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ನಿ., ಮಂಗಳೂರು
ಅಧ್ಯಕ್ಷರ ಕೊಠಡಿಯ ಉದ್ಘಾಟನೆ : ಶ್ರೀ ಭಾಸ್ಕರ ದೇವಸ್ಯ, ಅಧ್ಯಕ್ಷರು, ದ.ಕ. ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿ., ಮಂಗಳೂರು.
ಪೂರ್ವಾಹ್ನ ಗಂಟೆ 10.00 ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಟರಾಜ ವೇದಿಕೆಯಲ್ಲಿನ ಕಾರ್ಯಕ್ರಮಗಳು
ದೀಪ ಪ್ರಜ್ವಲನೆ : ಶ್ರೀ ಅಶೋಕ್ ಕುಮಾರ್ ರೈ, ಶಾಸಕರು, ಪುತ್ತೂರು ವಿಧಾನಸಭಾ ಕ್ಷೇತ್ರ
ಅಧ್ಯಕ್ಷತೆ : ಶ್ರೀ ಕಳುವಾಜೆ ವೆಂಕಟ್ರಮಣ ಗೌಡ, ಅಧ್ಯಕ್ಷರು, ಎವಿಜಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಪುತ್ತೂರು.
ಪ್ರಥಮ ಸಾಲಪತ್ರ ವಿತರಣೆ : ಶ್ರೀಮತಿ ಲೀಲಾವತಿ ಅಣ್ಣು ನಾಯ್ಕ, ಅಧ್ಯಕ್ಷರು, ನಗರಸಭೆ, ಪುತ್ತೂರು.
ಪ್ರಥಮ ಠೇವಣಿ ಪತ್ರ ವಿತರಣೆ : ಶ್ರೀ ರಮೇಶ್ ಎಚ್., ಸಹಕಾರ ಸಂಘಗಳ ಉಪನಿಬಂಧಕರು, ಮಂಗಳೂರು.
ಸಂಸ್ಥೆಯ ಚಿಹ್ನೆಯ ಅನಾವರಣ : ಶ್ರೀ ಪಂಜಿಗುಡ್ಡೆ ಈಶ್ವರ ಭಟ್, ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು.
'ದಯವಿಟ್ಟು ಬನ್ನಿ, ನಿಮ್ಮವರನ್ನೂ ಕರೆತನ್ನಿ, ಸಹಕಾರಕ್ಕೆ ಜೈ ಎನ್ನಿ' 'ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ' 'ಒಬ್ಬ ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ'
ಸೀತಾರಾಮ ಗೌಡ ಕಾಂತಿಲ - ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಉಮೇಶ್ ಮಳುವೇಲು - ಉಪಾಧ್ಯಕ್ಷರು
ಕಳುವಾಜೆ ವೆಂಕಟ್ರಮಣ ಗೌಡ - ಅಧ್ಯಕ್ಷರು

Godrej Finance Limited
Godrej | FINANCE
A Godrej Capital Company

ಸಾರ್ವಜನಿಕ ಪ್ರಕಟಣೆ

**ಭಾರತೀಯ ರಿಸರ್ವ್ ಬ್ಯಾಂಕ್ (ಬ್ಯಾಂಕೇತರ ಹಣಕಾಸು ಕಂಪನಿ - ಪ್ರಮಾಣ ಆಧಾರಿತ ನಿಯಂತ್ರಕ) ನಿರ್ದೇಶನಗಳು, 2023 ರ ಪರಿಚ್ಛೇದ 43 ರ ನಿಯಮಗಳ ಪ್ರಕಾರ 'ಗೋದ್ರೇಜ್ ಫೈನಾನ್ಸ್ ಲಿಮಿಟೆಡ್' ನಿಂದ ಸಾರ್ವಜನಿಕ ಪ್ರಕಟಣೆ**

**ಗೋದ್ರೇಜ್ ಫೈನಾನ್ಸ್ ಲಿಮಿಟೆಡ್** ("ಕಂಪನಿ" ಅಥವಾ "GFL") ಕಂಪನಿಗಳ ಕಾಯಿದೆ, 1956 ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದೆ (ಕಾರ್ಪೊರೇಟ್ ಐಡೆಂಟಿಫಿಕೇಷನ್ ನಂಬರ್: U67120MH1992PLC065457). ಇದು ಠೇವಣಿ ಪಡೆಯದ ಬ್ಯಾಂಕೇತರ ಹಣಕಾಸು ಸಂಸ್ಥೆ ("NBFC") ಆಗಿದ್ದು ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗೆ ನೋಂದಾಯಿಸಲ್ಪಟ್ಟಿದೆ (COR. No: 13.00368). GFL ನ ನೋಂದಾಯಿತ ಕಚೇರಿಯ ವಿಳಾಸ, ಗೋದ್ರೇಜ್ ಒನ್, ಪಿರೋಜ್‌ಷಾನಗರ್, ಈಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ವಿಖ್ರೋಲಿ (ಪೂ), ಮುಂಬೈ - 400079, ಮಹಾರಾಷ್ಟ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕಾರ್ಯಾಚರಣೆಯ ಕಾರಣಗಳಿಗಾಗಿ, ಕಂಪನಿಯು ತನ್ನ ಶಾಖಾ ಕಚೇರಿಯನ್ನು, ಮೈ ಬ್ರಾಂಚ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಶಾಪ್ ನಂ-204, ಡೋರ್ ನಂ-13-12-1395/33, ಇನ್‌ಲ್ಯಾಂಡ್ ಓರ್ನೇಟ್ ಬಿಲ್ಡಿಂಗ್, 2ನೇ ಮಹಡಿ, ನವಭಾರತ ಸರ್ಕಲ್, ಮಂಗಳೂರು-575003, ಕರ್ನಾಟಕ ಇಲ್ಲಿಂದ, ಶಾಪ್ ನಂ 203/204, ಎರಡನೇ ಮಹಡಿ, ಲೋಟಸ್ ಪ್ಯಾರಡೈಸ್ ಎಲೈಟ್, ಕರಂಗಲ್ಪಾಡಿ (ಬಂಟ್ಸ್ ಹಾಸ್ಟೆಲ್), ಎ.ಜೆ. ಗ್ರಾಂಡ್ ಹೋಟೆಲ್ ಎದುರು, ಮಂಗಳೂರು - 575003, ಕರ್ನಾಟಕ ಇಲ್ಲಿಗೆ, ಈ ಪ್ರಕಟಣೆ ನೀಡಲಾದ ದಿನಾಂಕದಿಂದ 3 ತಿಂಗಳೊಳಗೆ ಸ್ಥಳಾಂತರಗೊಳ್ಳಲಿದೆ.

ಏನೇ ಪ್ರಶ್ನೆಗಳಿದ್ದರೂ ಗ್ರಾಹಕರು customercare@godrejcapital.com. ಇಮೇಲ್ ಮೂಲಕ ಸಂಪರ್ಕಿಸಬಹುದು.

ಈ ಸಂಬಂಧ ಯಾವುದೇ ಸ್ಪಷ್ಟೀಕರಣ ಅಥವಾ ವಿಚಾರಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 (ಮೂವತ್ತು) ದಿನಗಳೊಳಗೆ ಕಂಪನಿಯ ನೋಂದಾಯಿತ ಕಚೇರಿಯ, ಮುಖ್ಯ ಅನುಸರಣಾ ಅಧಿಕಾರಿ, ಶ್ರೀ ಯೋಗೇಶ್ ಜೈನ್ ಅವರಿಗೆ ಅಥವಾ gfl.compliance@godrejfinance.com ಗೆ ಕಳುಹಿಸಬಹುದು.

ಸಹಿ/-
ಗೋದ್ರೇಜ್ ಫೈನಾನ್ಸ್ ಲಿಮಿಟೆಡ್ ಪರವಾಗಿ
ಸ್ಥಳ: ಮುಂಬೈ
ದಿನಾಂಕ: 29.09.2025

MOFPI
MINISTRY OF FOOD PROCESSING INDUSTRIES
GOVERNMENT OF INDIA
PMFME

ಮಹಿಳೆಯರು ಆಹಾರ ಉದ್ದಿಮೆದಾರರಾಗಲು ವಿಶೇಷ ಅಭಿಯಾನ
ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME)

ಮಹಿಳೆಯರ ಆರ್ಥಿಕ ಸ್ವಾವಲಂಬನೆ ಇಂದಿನ ಅವಶ್ಯಕತೆ
• ಮಹಿಳೆಯರು ಕೃಷಿ ಮತ್ತು ಗ್ರಾಮೀಣ ಬದುಕಿನ ಬೆನ್ನೆಲುಬು
• ಗ್ರಾಮೀಣ ಆರ್ಥಿಕತೆ ವೃದ್ಧಿಸಲು ಮಹಿಳೆಯರ ಪಾತ್ರ ದೊಡ್ಡದು
• ಸಾಂಪ್ರದಾಯಿಕ ಪಾಕವಿಧಾನದಲ್ಲಿ ಮಹಿಳೆಯರದೇ ಮೇಲುಗೈ
• ಸ್ಥಳೀಯವಾಗಿ ಬೆಳೆದ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಲ್ಲಿಯೂ ಇವರ ಪಾತ್ರ
• ನೆರೆ-ಹೊರೆಯ ಮಹಿಳೆಯರಿಗೆ ಉದ್ಯೋಗ ನೀಡುವ ಶಕ್ತಿ
• ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆ ಒದಗಿಸುವಲ್ಲಿ ಗಮನಾರ್ಹ ಕೊಡುಗೆ

ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆ / ಅಭಿವೃದ್ಧಿಗೆ PMFME ಯೋಜನೆಯು ಮಹಿಳೆಯರಿಗೆ ಸುವರ್ಣಾವಕಾಶ ಕಲ್ಪಿಸುತ್ತದೆ
• ಯೋಜನೆಯಡಿಯಲ್ಲಿ ಕಿರು ಆಹಾರ ಉದ್ದಿಮೆ ಸ್ಥಾಪಿಸಲು ಶೇ.50 ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷ ಸಾಲ ಸಂಪರ್ಕಿತ ಸಹಾಯಧನ (ಕೇಂದ್ರ ಸರ್ಕಾರದ ರೂ.6.00 ಲಕ್ಷ ಹಾಗೂ ರಾಜ್ಯ ಸರ್ಕಾರದ ರೂ.9.00 ಲಕ್ಷ ಸಹಾಯಧನ ಲಭ್ಯವಿರುತ್ತದೆ).
• ಹೊಸದಾಗಿ ಆಹಾರ ಉದ್ದಿಮೆ ಸ್ಥಾಪಿಸಲು ಆಸಕ್ತಿಯುಳ್ಳವರು ಅಥವಾ ಈಗಾಗಲೇ ಆಹಾರ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವವರು ಅದನ್ನು ಮೇಲ್ದರ್ಜೆಗೇರಿಸಲು ಈ ಯೋಜನೆ ಅವಕಾಶ ಕಲ್ಪಿಸುತ್ತದೆ.

ಆಸಕ್ತ ಮಹಿಳೆಯರು ಕೆಪೆಕ್ ಕಚೇರಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ಭೇಟಿ ನೀಡುವುದು:
• ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ರೇಷನ್ ಕಾರ್ಡ್/ ವಿದ್ಯುತ್ ಬಿಲ್, ಉದ್ದಿಮೆದಾರರ ಫೋಟೋಗಳು, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ - ಕಳೆದ 6 ತಿಂಗಳು, ಯಂತ್ರೋಪಕರಣಗಳ ವಿವರಗಳು ಮತ್ತು ಕೊಟೇಷನ್, ಬಾಡಿಗೆ/ಲೀಸ್ ಕರಾರಪತ್ರ, ಸ್ಥಾಪಿಸಬೇಕಿರುವ ಉದ್ದಿಮೆಯ ವಿವರಗಳು

ಯೋಜನೆಯಡಿಯಲ್ಲಿ ಸ್ಥಾಪಿಸಬಹುದಾದ ಕಿರು ಆಹಾರ ಉದ್ದಿಮೆಗಳು:
• ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಚಟ್ನಿ ಪುಡಿಗಳು, ರೊಟ್ಟಿ, ಮಾಲ್ಟ್, ಹುರಿಹಿಟ್ಟು, ತ್ವರಿತ ಮಿಶ್ರಣಗಳು (instant mixes), ಮಸಾಲೆ - ಸಾಂಬಾರ ಪದಾರ್ಥಗಳು, ಇಡ್ಲಿ - ದೋಸೆ ಹಿಟ್ಟು, ಹಣ್ಣಿನ ಜಾಮ್- ಜೆಲ್ಲಿ ಮತ್ತು ಪಾನೀಯಗಳು, ಹಾಲಿನ ಉತ್ಪನ್ನಗಳಾದ ಬೆಣ್ಣೆ, ತುಪ್ಪ, ಪನ್ನೀರ್, ಚೀಸ್, ಜೇನುತುಪ್ಪ ಉತ್ಪನ್ನಗಳು, ಸಿರಿಧಾನ್ಯ ಆಧಾರಿತ ಉತ್ಪನ್ನಗಳು, ಎಣ್ಣೆ ಬೀಜ ಆಧಾರಿತ ಉತ್ಪನ್ನಗಳು, ಬೆಲ್ಲ ಆಧಾರಿತ ಉತ್ಪನ್ನಗಳು, ಮೆಣಸಿನಕಾಯಿ ಆಧಾರಿತ ಉತ್ಪನ್ನಗಳು ಅಥವಾ ಇನ್ನಾವುದೇ ಸಂಸ್ಕರಿಸಿದ ಆಹಾರ ಉತ್ಪನ್ನಗಳನ್ನು ಸ್ಥಾಪಿಸಲು ಅವಕಾಶವಿದೆ.

ವಿಶೇಷ ಅಭಿಯಾನದ ಭಾಗವಾಗಿ ಕೆಪೆಕ್ ಸಂಸ್ಥೆಯಲ್ಲಿ ಕಲ್ಪಿಸಿರುವ ವ್ಯವಸ್ಥೆಗಳು
• ಮಹಿಳಾ ಸಹಾಯವಾಣಿ ಕೇಂದ್ರ
• ಬ್ಯಾಂಕಿಂಗ್ ಸಲಹಾ ಕೋಶ
• ಅರ್ಜಿ ಸಲ್ಲಿಕೆ ಮತ್ತು ವಿಲೇವಾರಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ
• ಅರ್ಜಿ ಸಲ್ಲಿಸಿದ ದಿನದಂದೇ ಅರ್ಜಿಯ ಪರಿಶೀಲನೆ ಹಾಗೂ ಸಹಾಯಧನಕ್ಕೆ ಶಿಫಾರಸ್ಸು

ಹೆಚ್ಚಿನ ಮಾಹಿತಿಗಾಗಿ ವಿಶೇಷ ಮಹಿಳಾ ಸಹಾಯವಾಣಿಯ ಸಲಹೆಗಾರರು / ಕೆಪೆಕ್ ಸಿಬ್ಬಂದಿಯನ್ನು ಸಂಪರ್ಕಿಸಿ:
: 76187 86813 / 14 / 15 / 16 / 17 / 18
Email: pmfmekarnataka@gmail.com Website: https://kappec.karnataka.gov.in/
ಕೆಪೆಕ್ ಕೇಂದ್ರ ಕಚೇರಿಗೆ ಬರಲು ಸಾಧ್ಯವಾಗದವರು ಸಂಬಂಧಪಟ್ಟ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೂ ಸಹ ಭೇಟಿ ನೀಡಿ ಈ ವಿಶೇಷ ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದು
ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ) ಹಾಗೂ ರಾಜ್ಯ ನೋಡಲ್ ಏಜೆನ್ಸಿ- PMFME ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ), ಬೆಂಗಳೂರು-560 025